
# ಲಾಕ್ ಪರಿಹಾರವಲ್ಲ

## ನಿರ್ಬಂಧ ಕುರಿತು ಕೈಗಾರಿಕೋದ್ಯಮಿಗಳು, ತಜ್ಞ ವೈದ್ಯರ ಅಭಿಮತ
## ಪರೀಕ್ಷೆ ಹೆಚ್ಚಿಸಬೇಕು, ಲಸಿಕೆ ಪಡೆಯಬೇಕು ಎನ್ನುತ್ತಾರೆ ಡಾಕ್ಟರ್‌ಗಳು

**ಬೆಂಗಳೂರು:** ಕೊರೊನಾ ನಿಯಂತ್ರಣಕ್ಕೆ ಲಾಕ್‌ಡೌನ್ ಮದ್ದು ಅಲ್ಲವೇ ಅಲ್ಲ.

ಇದು ಕಳೆದ ವರ್ಷದ ಲಾಕ್‌ಡೌನ್ ನೋಡಿ, ಕಷ್ಟ ಅನುಭವಿಸಿದ ಕೈಗಾರಿಕೋದ್ಯಮಿಗಳ ಮಾತುಗಳು. ದೇಶವೂ ಸೇರಿದಂತೆ ರಾಜ್ಯದಲ್ಲಿ ದಿನದಿಂದ ದಿನಕ್ಕೆ ಕೊರೊನಾ ಸೋಂಕು ಹೆಚ್ಚಾಗುತ್ತಿರುವ ಬೆನ್ನಲ್ಲೇ, ಲಾಕ್‌ಡೌನ್ ಸದ್ದು ಕೇಳುತ್ತಿದೆ. ಈಗಾಗಲೇ ಬೆಂಗಳೂರು ಸೇರಿದಂತೆ ಎಂಟು ನಗರಗಳಲ್ಲಿ ರಾತ್ರಿ ಕೊರೊನಾ ಕರ್ಫ್ಯೂ ಜಾರಿ ಮಾಡಲಾಗಿದ್ದು, ಇದಾದ ಬಳಿಕ ಲಾಕ್‌ಡೌನ್ ಹೇರಬಹುದೇ ಎಂಬ ಅನುಮಾನಗಳೂ ವ್ಯಕ್ತವಾಗಿವೆ. ಹೀಗಾಗಿ, ರಾಜ್ಯದ ವಿವಿಧ ಕೈಗಾರಿಕೋದ್ಯಮಿಗಳು, ತಜ್ಞ ವೈದ್ಯರು ಮತ್ತೊಂದು ಲಾಕ್‌ಡೌನ್ ಬಗ್ಗೆ ಆಕ್ಷೇಪವೆತ್ತಿದ್ದಾರೆ.



**ತಜ್ಞ ವೈದ್ಯರು ಹೇಳುವುದೇನು?:** ರಾಜ್ಯದಲ್ಲಿ ಕೊರೊನಾ ಮೊದಲ ಅಲೆಯಲ್ಲಿ ದಿನನಿತ್ಯ ಹತ್ತು ಸಾವಿರ ದಾಟಿದ್ದ ಸೋಂಕು ಪ್ರಕರಣಗಳನ್ನು ಹತೋಟಿಗೆ ತಂದಿದ್ದು ಲಾಕ್ ಡೌನ್ ಎಂಬ ತಾತ್ಕಾಲಿಕ ಮದ್ದು ಅಲ್ಲವೇ ಅಲ್ಲ!

ಅಕ್ಷರಶಃ ಸರ್ಕಾರ ಕೈಗೊಂಡ ದುಪ್ಪಟ್ಟು ಸೋಂಕು ಪರೀಕ್ಷೆಗಳು, ಶೀಘ್ರ ಸೋಂಕಿತರ ಪತ್ತೆ ಮತ್ತು ಚಿಕಿತ್ಸೆ ಎಂಬ ಕ್ರಮಗಳು. ಹೀಗಾಗಿ, ಪ್ರಸ್ತುತ ಎರಡನೇ ಅಲೆ ತಗ್ಗಿಸಲು ಲಾಕ್‌ಡೌನ್ ಎಂಬ ತಾತ್ಕಾಲಿಕ ಮಾರ್ಗ ಒಂದೇ ಪರಿಹಾರವಲ್ಲ ಎಂಬ ಅಭಿಪ್ರಾಯ ತಜ್ಞರಿಂದ ಕೇಳಿಬಂದಿದೆ. ಕೊರೊನಾ ಸೋಂಕು ಚಕ್ರ ಪುನರಾವರ್ತನೆಯಾಗುತ್ತದೆ. ಅಂದರೆ, ಪ್ರಕರಣಗಳು ಏರಿಕೆ ಹಾದಿಯಲ್ಲಿ ಸಾಗಿ ಗರಿಷ್ಠ ಹಂತಕ್ಕೆ ತಲುಪಿ ಮತ್ತೆ ಇಳಿಕೆಯಾಗುತ್ತಾ ಸಾಗುತ್ತದೆ. ಆ ಪ್ರದೇಶದಲ್ಲಿ ಲಾಕ್‌ಡೌನ್ ಮಾಡುವುದರಿಂದ ಸದ್ಯ ಸಂಭವಿಸಲಿರುವ ಸೋಂಕಿನ ಮಹಾಸ್ಫೋಟವನ್ನು ಮುಂದಕ್ಕೆ ತಳ್ಳಿದಂತಾಗುತ್ತದೆ ಎಂದು ತಜ್ಞರು ಹೇಳುತ್ತಾರೆ.

**ಲಾಕ್‌ಡೌನ್‌ನಿಂದ ಕಡಿಮೆಯಾಗಿರಲಿಲ್ಲ!:** ಕೊರೊನಾ ಅಲೆ ತಡೆಯುವಲ್ಲಿ ಲಾಕ್‌ಡೌನ್ ಪರಿಣಾಮಕಾರಿಯಾಗಿರಲಿಲ್ಲ ಎಂಬುದಕ್ಕೆ ಸಾಕ್ಷಿ ಮೊದಲ ಅಲೆ. 4 ಹಂತದ ಲಾಕ್‌ಡೌನ್‌ನಲ್ಲಿ (2020 ಮಾರ್ಚ್ 25 – ಮೇ 31) 3,223 ಕೊರೊನಾ ಪ್ರಕರಣಗಳು ವರದಿಯಾಗಿದ್ದವು. ಅದೇ ಅನ್‌ಲಾಕ್ ಬಳಿಕ ಜೂನ್‌ನಲ್ಲಿ 13 ಸಾವಿರ, ಜುಲೈ 1.18 ಲಕ್ಷ, ಆಗಸ್ಟ್‌ನಲ್ಲಿ 2.29 ಲಕ್ಷ, ಸೆಪ್ಟೆಂಬರ್ 2.75 ಲಕ್ಷ, ಅಕ್ಟೋಬರ್ 2.14 ಪ್ರಕರಣ ಪತ್ತೆಯಾದವು.

▶ 7ನೇ ಪುಟಕ್ಕೆ

### ಕೈಗಾರಿಕಾ ವಲಯ ಹೇಳುವುದೇನು?

**ಲಾಕ್‌ಡೌನ್ ಸದ್ದು ಸಂಬಂಧ ಉದಯವಾಣಿ ರಾಜ್ಯದ ವಿವಿಧ ಕೈಗಾರಿಕೋದ್ಯಮಿಗಳನ್ನು ಮಾತನಾಡಿಸಿತು. ಕಾಸಿಯಾ ಅಧ್ಯಕ್ಷ ಕೆ.ಬಿ.ಅರಸಪ್ಪ, ಎಫ್‌ಕೆಸಿಸಿಐ ಕಾರ್ಯಕಾರಿಣಿ ಸದಸ್ಯ ಜೆ.ಕ್ರಾಸ್ತಾ, ಕ್ರೆಡಾಯ್ ಅಧ್ಯಕ್ಷ ಸುರೇಶ್ ಹರಿ, ರಾಜ್ಯ ಹೋಟೆಲ್‌ಗಳ ಮಾಲೀಕರ ಸಂಘದ ಅಧ್ಯಕ್ಷ ಚಂದ್ರಶೇಖರ ಹೆಬ್ಬಾರ್ ಅವರು ಲಾಕ್‌ಡೌನ್ ಬೇಡವೇ ಬೇಡ ಎಂದು ಪ್ರಬಲವಾಗಿ ದನಿ ಎತ್ತಿದರು.**

- ಲಾಕ್‌ಡೌನ್ ಹಿನ್ನೆಲೆ ಸಣ್ಣ ಕೈಗಾರಿಕಾ ವಲಯ ತಿಂಗಳಿಗೆ 10 ಕೋಟಿ ರೂ. ನಷ್ಟ ಅನುಭವಿಸಿತ್ತು. ಈ ನಷ್ಟದಿಂದ ಇನ್ನೂ ಹೊರಬರಲಾಗಿಲ್ಲ. ಮತ್ತೆ ಲಾಕ್‌ಡೌನ್ ಮಾಡಿದರೆ, ಸಣ್ಣ ಕೈಗಾರಿಕಾ ವಲಯ ಪಾತಾಳ ಸೇರಲಿದೆ.
- ಕೈಗಾರಿಕಾ ವಲಯದಲ್ಲಿ ಸೋಂಕಿನ ಬಗ್ಗೆ ಎಚ್ಚರ ವಹಿಸಿದ್ದೇವೆ. ಸರ್ಕಾರದ ಮಾರ್ಗಸೂಚಿಗಳನ್ನೂ ಪಾಲಿಸಿದ್ದೇವೆ. ಹೊರ ರಾಜ್ಯಗಳಿಂದ ಬರುವವರ ಮೇಲೆ ನಿಗಾ ವಹಿಸಿ.
- ಕಳೆದ ಲಾಕ್‌ಡೌನ್ ವೇಳೆ ಬೃಹತ್ ಕೈಗಾರಿಕೆಗಳ ವಲಯವೂ ದಿನಕ್ಕೆ 8 ಸಾವಿರ ಕೋಟಿ ರೂ. ನಷ್ಟ ಅನುಭವಿಸಿದೆ. ಈಗ ಐಸಿಯುವಿನಿಂದ ಹೊರಬಂದಿದ್ದೇವೆ. ಮತ್ತೆ ಲಾಕ್‌ಡೌನ್ ಮಾಡಿದರೆ, ಚೇತರಿಸಿಕೊಳ್ಳುತ್ತಿರುವ ರೋಗಿಯನ್ನು ಐಸಿಯುಗೆ ಹಾಕಿದಂತೆ ಆಗುತ್ತದೆ.
- ಲಾಕ್‌ಡೌನ್ ಬದಲಿಗೆ ಕೈಗಾರಿಕೆಗಳಿಗೆ ವಿಟಮಿನ್ ನೀಡುವ ಕೆಲಸ ಮಾಡಿ. ಲಾಕ್‌ಡೌನ್ ಜಾರಿ ಮಾಡಲೇಬೇಡಿ.
- ಎಲ್ಲಾ ಸಮಸ್ಯೆಗೂ ಲಾಕ್‌ಡೌನ್ ಮದ್ದಲ್ಲ. ಕಳೆದ ಲಾಕ್‌ಡೌನ್ ವೇಳೆ ಎಷ್ಟು ಆರ್ಥಿಕ ನಷ್ಟವಾಗಿದೆ ಎಂದು ಊಹಿಸುವುದೂ ಅಸಾಧ್ಯ.
- ನೈಟ್ ಕರ್ಫ್ಯೂ ಒಳ್ಳೆಯ ನಿರ್ಧಾರ. ಆದರೆ ಜನ ಗುಂಪುಗೂಡುವ ಬಗ್ಗೆ ನಿಗಾವಹಿಸಬೇಕು. ಜಾತ್ರೆ, ಸಮಾರಂಭ, ರಾಜಕೀಯ ಪ್ರಚಾರ ಸಭೆಗಳಿಗೆ ಬ್ರೇಕ್ ಹಾಕಬೇಕು.
- ಹಿಂದೆ ಹೋಟೆಲ್ ಉದ್ಯಮಕ್ಕೆ ಸಾವಿರಾರು ಕೋಟಿ ನಷ್ಟ ಆಗಿದೆ. ಶೇ.30 ಹೋಟೆಲ್‌ಗಳು ಬಂದ್ ಆಗಿವೆ. 1.5 ಲಕ್ಷಕ್ಕೂ ಅಧಿಕ ಜನ ಕೆಲಸ ಕಳೆದುಕೊಂಡಿದ್ದಾರೆ. ಸರ್ಕಾರ 'ಲಾಕ್'ನಿಂದ ಈ ಉದ್ಯಮವನ್ನು ಹೊರಗಿಡಲಿ.

### 18, 19ಕ್ಕೆ ಸರ್ವಪಕ್ಷ ಸಭೆ



**ಮುದಗಲ್ಲ:** ಕೋವಿಡ್ ಹೆಚ್ಚಳ ಹಿನ್ನೆಲೆಯಲ್ಲಿ ಏ.18, 19ರಂದು ಮಹತ್ವದ ಸರ್ವಪಕ್ಷ ಸಭೆ ಕರೆಯಲಾಗಿದೆ ಎಂದು ಸಿಎಂ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ. ವಿಪಕ್ಷ ನಾಯಕರಾದ ಸಿದ್ದರಾಮಯ್ಯ, ಕುಮಾರಸ್ವಾಮಿ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ ಅವರನ್ನು ಆಹ್ವಾನಿಸಿ, ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಲಾಗುವುದು ಎಂದ ಅವರು, ಯಾವುದೇ ಕಾರಣಕ್ಕೂ ಮತ್ತೆ ಲಾಕ್‌ಡೌನ್ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

**78 ಸಾವಿರ ಕೋಟಿ ನಷ್ಟ** ➘8

### ಹಬ್ಬ ಸರಳವಾಗಿರಲಿ; ನೀವು ಸುರಕ್ಷಿತವಾಗಿರಿ

**ಜನತೆಗೆ ತಜ್ಞರ ಸಲಹೆ**

ಕೊರೊನಾ ಅಬ್ಬರದ ನಡುವೆಯೇ ಯುಗಾದಿ ಹಬ್ಬದ ಮೂಲಕ 'ನವ ಮನ್ವಂತರ'ವನ್ನು ಸ್ವಾಗತಿಸುತ್ತಿದ್ದೇವೆ. ಆದರೆ, ನಿಮ್ಮ ನಡೆಯು ಸೋಂಕಿನ ಪ್ರಸರಣಕ್ಕೆ ಉತ್ತೇಜನ ನೀಡದಂತೆ, ಮನೆಗಳಲ್ಲೇ ಸರಳವಾಗಿ ಹಾಗೂ ಸುರಕ್ಷಿತವಾಗಿ ಹಬ್ಬವನ್ನು ಆಚರಿಸಿ ಎನ್ನುವುದು 'ಉದಯವಾಣಿ'ಯ ಕಾಳಜಿ. ಈ ಕುರಿತು ವಿವಿಧ ಕ್ಷೇತ್ರಗಳ ತಜ್ಞರ ಸಲಹೆ ಇಲ್ಲಿದೆ.

ಸೋಂಕು ಹೆಚ್ಚಿರುವ ಪ್ರದೇಶದ ಜನರು ಓಡಾಟ ನಡೆಸುವುದರಿಂದ ಸೋಂಕು ಎಲ್ಲೆಡೆ ಹಬ್ಬುತ್ತದೆ. ಬೆಂಗಳೂರಿನಲ್ಲಿ ವಾಸವಿರುವವರು ಹಬ್ಬಕ್ಕೆಂದು ಹಳ್ಳಿಗಳಿಗೆ ತೆರಳಬೇಡಿ.
• **ಡಾ.ಸಿ.ಎನ್.ಮಂಜುನಾಥ್,** ನಿರ್ದೇಶಕರು, ಜಯದೇವ ಹೃದ್ರೋಗ ಸಂಸ್ಥೆ

ಜನರು ಅನಗತ್ಯ ಪ್ರವಾಸ, ಓಡಾಟ ನಡೆಸದೇ ಹಬ್ಬ ಆಚರಿಸಬೇಕು. 45 ವರ್ಷ ಮೇಲ್ಪಟ್ಟವರು ಯುಗಾದಿ ಹಬ್ಬದ ಜತೆಗೆ ಲಸಿಕೆ ಹಬ್ಬದಲ್ಲಿ ಭಾಗವಹಿಸಬೇಕು.
• **ಡಾ.ಸುದರ್ಶನ್ ಬಲ್ಲಾಳ್,** ಅಧ್ಯಕ್ಷರು ಮಣಿಪಾಲ್ ಆಸ್ಪತ್ರೆಗಳು

ಹಬ್ಬದ ವೇಳೆ ಜನದಟ್ಟಣೆ ಸೇರುವ ಬದಲು ಮನೆಯಲ್ಲೇ ಇರೋಣ. ಎಲ್ಲರ ಆರೋಗ್ಯದ ಸುರಕ್ಷತೆಗೆ ಒತ್ತು ಕೊಡೋಣ ಎಂಬ ಸಂಕಲ್ಪದ ಹಬ್ಬ ಮಾಡೋಣ.
• **ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀಜಿ,** ಗವಿಮಠ, ಕೊಪ್ಪಳ

ನಾಗರಿಕರು ಆರೋಗ್ಯ, ಸುರಕ್ಷತೆಗೆ ಹೆಚ್ಚು ಗಮನ ನೀಡಬೇಕು. ಹಬ್ಬವನ್ನು ಮನೆಯಲ್ಲೇ ಆಚರಿಸಿ. ಪ್ರತಿಯೊಬ್ಬರೂ ವ್ಯಾಕ್ಸಿನ್ ಪಡೆದರೆ ರಾಜ್ಯ ಕೊರೊನಾ ಮುಕ್ತವಾಗಲಿದೆ.
• **ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ,** ಆದಿಚುಂಚನಗಿರಿ ಪೀಠಾಧ್ಯಕ್ಷರು

ಉವ
13/4/21

# ಲಾಕ್ ಪರಿಹಾರವಲ್ಲ

1ನೇ ಪುಟದಿಂದ ▶ ಈ ಅವಧಿಯಲ್ಲೇ ಸತತ ನೂರು ದಿನ ಸರಾಸರಿ ನೂರು ಸೋಂಕಿತರ ಸಾವಾಗಿತ್ತು. ಆ ಬಳಿಕ ಸೋಂಕು ಇಳಿಕೆಯಾಗುತ್ತಾ ಸಾಗಿ ನವೆಂಬರ್‌ಗೆ 61 ಸಾವಿರ, ಡಿಸೆಂಬರ್‌ಗೆ 45 ಸಾವಿರಕ್ಕೆ ಇಳಿಕೆಯಾದವು.

**ಪರೀಕ್ಷೆ ಹೆಚ್ಚಳವೇ ಮದ್ದು:** ಲಾಕ್‌ಡೌನ್ ನಿಂದ ಸೋಂಕಿನ ಸ್ಫೋಟವನ್ನು ಮುಂದೂಡಿದ್ದ ಮತ್ತೊಮ್ಮೆ ಲಾಕ್‌ಡೌನ್ ಮಾಡಲಾಗದ ಪರಿಸ್ಥಿತಿಯಲ್ಲಿದ್ದ ರಾಜ್ಯ ಸರ್ಕಾರವು ಬಳಸಿದ್ದು - ಹೆಚ್ಚು ಪರೀಕ್ಷೆ ಎಂಬ ಅಸ್ತ್ರವೇ ಹೊರತು ಲಾಕ್ ಡೌನ್ ಅಲ್ಲ. ಸೋಂಕು ಹೆಚ್ಚಳವಾದ ಆಗಸ್ಟ್‌ನಲ್ಲಿ ನಿತ್ಯ 50 ಸಾವಿರ ಇದ್ದ ಪರೀಕ್ಷೆಗಳನ್ನು ಅಕ್ಟೋಬರ್ ನಲ್ಲಿ ನಿತ್ಯ ಒಂದು ಲಕ್ಷಕ್ಕೆ (ದುಪ್ಪಟ್ಟು ಪ್ರಮಾಣಕ್ಕೆ) ಹೆಚ್ಚಿಸಲಾಯಿತು. ಇದರಿಂದ ಸೋಂಕಿತರು ಶೀಘ್ರ ಪತ್ತೆಯಾಗಿ ಸೋಂಕು ಹರಡುವಿಕೆ ಕಡಿಮೆಯಾಗಿ ಹೊಸ ಪ್ರಕರಣಗಳು ನಿಯಂತ್ರಣಕ್ಕೆ ಬಂದವು.

ಈ ವರ್ಷ ಮಾರ್ಚ್ ಅಂತ್ಯದಲ್ಲಿ 70 ಸಾವಿರ ಇದ್ದ ಸೋಂಕು ಪರೀಕ್ಷೆಗಳನ್ನು 1.20 ಲಕ್ಷಕ್ಕೆ ಹೆಚ್ಚಿಸಿದೆ. ಅದರಲ್ಲೂ ಬೆಂಗಳೂರಿನಲ್ಲಿ ಒಂದು ಲಕ್ಷ ಸಮೀಪ ಪರೀಕ್ಷೆಗಳು ನಡೆಯುತ್ತಿವೆ. ಹೀಗಾಗಿಯೇ ಒಮ್ಮೆಗೆ ಪ್ರಕರಣಗಳು ಹೆಚ್ಚಾಗುತ್ತಿವೆ. ಗಾಬರಿಯಾಗುವುದು ಬೇಡ, ಕಳೆದ ಬಾರಿಗೆ ಹೋಲಿಸಿದರೆ ಸಾವಿನ ಪ್ರಮಾಣ ಅರ್ಧದಷ್ಟಿದೆ ಎನ್ನುತ್ತಾರೆ ಆರೋಗ್ಯ ಇಲಾಖೆ ಅಧಿಕಾರಿಗಳು.

**ಕಳೆದ ವರ್ಷ ಎರಡನೇ ಬಾರಿ ಲಾಕ್ ಡೌನ್ ಪ್ರಸ್ತಾಪ ಬರಲೇ ಇಲ್ಲ:** ಕಳೆದ ವರ್ಷ ಲಾಕ್‌ಡೌನ್‌ನ ಮೂರು ತಿಂಗಳ ಅವಧಿಯಲ್ಲಿ ಮುಂದೆ ಹೆಚ್ಚಾಗುವ ಕೊರೊನಾವನ್ನು ನಿಯಂತ್ರಣ ಮಾಡುವ ಆರೋಗ್ಯ ವ್ಯವಸ್ಥೆ ಬಲಪಡಿಸಿಕೊಳ್ಳಲಾಯಿತು. ಜನರಿಗೆ ತಿಳಿವಳಿಕೆ ನೀಡಲಾಯಿತು. ಹೆಚ್ಚಾಗಿ, ಶ್ರಮಿಕ ವರ್ಗದ ಕಷ್ಟ ಆರ್ಥಿಕ ಸಂಕಷ್ಟ ಅರ್ಥವಾಯಿತು. ಹೀಗಾಗಿಯೇ, ಅನ್‌ಲಾಕ್ ಬಳಿಕ ಹತ್ತು ಪಟ್ಟು ಸೋಂಕು ಹೆಚ್ಚಾದರೂ ಮತ್ತೆ ಲಾಕ್‌ಡೌನ್ ಮಾಡಿ ಎಂಬ ವಿಷಯ ಮುನ್ನೆಲೆಗೆ ಬರಲಿಲ್ಲ. ಈಗಲೂ ಅಷ್ಟೇ ವ್ಯವಸ್ಥೆ ಬಲಪಡಿಸಿಕೊಂಡು ಮುನ್ನಡೆಯಬೇಕು. ಲಾಕ್ ಡೌನ್‌ನಿಂದ ಸದ್ಯ ಮುಂದೂಡಬಹುದು ಅಷ್ಟೇ. ಸೋಂಕು ನಿಯಂತ್ರಣ ಮಾಡಲು ಸಾಧ್ಯವಿಲ್ಲ. ಸ್ವಯಂ ಮುಂಜಾಗ್ರತಾ ಪಾಲನೆಗೆ, ಸರ್ಕಾರದ ನಿಯಮ ಪಾಲನೆಯೇ ಸೋಂಕು ತಡೆಗೆ ಮದ್ದು ಎಂದು ಆರೋಗ್ಯ ತಜ್ಞರು ಹೇಳುತ್ತಾರೆ.

**ಲಾಕ್ ಡೌನ್ ಯಾಕೆ ಅನಿವಾರ್ಯವಾಗಿತ್ತು?:** ಕಳೆದ ವರ್ಷ ಕೊರೊನಾ ಸೋಂಕು ಎಲ್ಲರಿಗೂ ಹೊಸದಾಗಿದ್ದು, ಅದರ ವರ್ತನೆ, ಗಂಭೀರತೆ ತಿಳಿದಿರಲಿಲ್ಲ. ಚಿಕಿತ್ಸೆ ವಿಧಾನ ಗೊತ್ತಿರಲಿಲ್ಲ. ಔಷಧ ಅಥವಾ ಲಸಿಕೆ ಇರಲಿಲ್ಲ. ಸೋಂಕು ಒಮ್ಮೆಗೆ ಸ್ಫೋಟಗೊಂಡು, ಲಕ್ಷಾಂತರ ಮಂದಿ ಸೋಂಕಿತರಾಗಿ ಆಸ್ಪತ್ರೆಯಲ್ಲಿ ಹಾಸಿಗೆ, ಚಿಕಿತ್ಸೆ ಕೊರತೆಯಾಗಬಹುದು, ಹೆಚ್ಚು ಜನ ಸಾವಿಗೀಡಾಗಬಹುದು ಎಂಬ ಕಾರಣಕ್ಕೆ ಸೋಂಕಿನ ವೇಗಕ್ಕೆ ತಕ್ಷಣ ಕಡಿವಾಣ ಹಾಕುವುದಕ್ಕೆ ಲಾಕ್ ಡೌನ್ ಅನಿವಾರ್ಯವಾಗಿತ್ತು. ಆದರೆ, ಸದ್ಯ ಒಂದು ವರ್ಷದ ಅನುಭವವಿದ್ದು, ಸೋಂಕಿನ ಒಂದು ಪುನರಾವರ್ತನೆ (ಚಕ್ರ) ತಿಳಿದಿದೆ. ಲಸಿಕೆ ಎಂಬ ದೊಡ್ಡ ಆಯುಧ ಜತೆಗಿದೆ. ಹೀಗಾಗಿ, ಅಗತ್ಯ ಹಾಸಿಗೆ, ವೆಂಟಿಲೇಟರ್, ಆಕ್ಸಿಜನ್ ಚಿಕಿತ್ಸಾ ಘಟಕಗಳ ವ್ಯವಸ್ಥೆ ಮಾಡಿಕೊಂಡರೆ ಯಾವುದೇ ಸಮಸ್ಯೆ ಬರುವುದಿಲ್ಲ ಎನ್ನುತ್ತಾರೆ ತಜ್ಞರ ಸಲಹಾ ಸಮಿತಿ ಸದಸ್ಯ, ಮಣಿಪಾಲ್ ಆಸ್ಪತ್ರೆಗಳ ಅಧ್ಯಕ್ಷ ಡಾ.ಸುದರ್ಶನ್ ಬಲ್ಲಾಳ್.

**ಪಾಸಿಟಿವಿಟಿ ದರ ಶೇ.8 ಇದೆ:** ರಾಜ್ಯದಲ್ಲಿ ಅತಿ ಹೆಚ್ಚು ಕಳೆದ ವರ್ಷದ ಜುಲೈ ನಲ್ಲಿ ಶೇ.26 ಪಾಸಿಟಿವಿಟಿ ದರ ದಾಖಲಾಗಿದೆ. ಅಂದರೆ, ಪರೀಕ್ಷೆಗೊಳಗಾದ ನಾಲ್ಕು ಮಂದಿಯಲ್ಲಿ ಒಬ್ಬರಿಗೆ ಸೋಂಕು ದೃಢಪಡುತ್ತಿತ್ತು. ಸದ್ಯ ಪಾಸಿಟಿವಿಟಿ ದರ ಶೇ. 8ಇದೆ.

## ಹಬ್ಬ ಸರಳವಾಗಿರಲಿ

ಈ ಯುಗಾದಿ ಕೊರೊನಾ ಕೊನೆಗಾಣಿಸುವ ಯುಗಾದಿ ಆಗಬೇಕಾಗಿದೆ. ಕೊರೊನಾ ಎರಡನೇ ಅಲೆಯ ಬಗ್ಗೆ ಭಯ ಬೇಡ, ಆದರೆ ಎಚ್ಚರಿಕೆಯಿರಲಿ. ನಮ್ಮ ಮನೆ ಯಲ್ಲಿದ್ದುಕೊಂಡೇ ಹಬ್ಬ ಆಚರಿಸೋಣ.

• **ಸಿದ್ದಲಿಂಗಯ್ಯ**, ಕವಿ

ಕಷ್ಟವನ್ನು ಹಿತವಾಗಿ ಪರಿವರ್ತಿಸುವ ಹಾದಿಯನ್ನು ಹುಡುಕಬೇಕು. ನಮ್ಮ ನಮ್ಮ ಮನೆಗಳಲ್ಲಿ ಹಬ್ಬವನ್ನು ಸರಳವಾಗಿ ಆಚರಿಸೋಣ, ನೆರೆಹೊರೆಯ ಮನೆಗಳಿಗೆ ಧಾವಿಸದೇ ಮನೆಯಲ್ಲೇ ಇರೋಣ. ಕೊರೊನಾ ತೊಲಗಿಸಲು ಪಣ ತೊಡೋಣ.

• **ಹಂಪ ನಾಗರಾಜಯ್ಯ**, ಹಿರಿಯ ಸಂಶೋಧಕ

ಮುಂದಿನ ಹಬ್ಬಗಳನ್ನು ಚೆನ್ನಾಗಿ ಆಚರಿಸಬೇಕು ಅಂದರೆ ಈ ಬಾರಿ ಯುಗಾದಿಯನ್ನು ಸರಳವಾಗಿ, ಗುಂಪು ಸೇರದೇ ಆಚರಿಸಬೇಕು. ಇದ್ದಲ್ಲಿಯೇ ಕುಟುಂಬಸ್ಥರೊಂದಿಗೆ, ಮನೆಯಲ್ಲಿಯೇ ಸಂಭ್ರಮಿಸಿ.

• **ಡಾ.ಗಿರಿಧರ್ ಬಾಬು**, ತಜ್ಞರ ಸಲಹಾ ಸಮಿತಿ ಸದಸ್ಯ